ಇ) ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಪರಿಶೀಲನೆಯಲ್ಲಿ ಇಲ್ಲ.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರಶ್ನೆ ನಂ. ೧೨೪ (೨೯೮)

ಶ್ರೀ ಬಿ. ಎ. ಇದಿನಬ್ಬ.—ಇದುವರೆವಿಗೆ ೧೪ ಅರ್ಜಿಗಳು ಬಂದಿವೆ ಎಂಬುದಾಗಿ ಹೇಳಿದ್ದೀರಿ. ಹೇಗೂ ವರ್ಷ ಮುಗಿಯುತ್ತಾ ಬಂದಿದೆ, ಆದ್ದರಿಂದ ಈ ಸದನ ಮುಂಗಿಯುವುದರೊಳಗಾಗಿ ಆ ೧೪ ಜನರಿಗೂ ಸಹಾಯಧನವನ್ನು ಕೊಟ್ಟು ಮುಗಿಸುತ್ತೀರಾ ?

ಶ್ರೀ ಜಿ. ಆರ್. ಯಾವಗಲ್.—ಇದುವರೆವಿಗೆ ನಮಗೆ ೪ ಅರ್ಜಿಗಳು ಬಂದಿವೆ.....

ಶ್ರೀ ಬಿ. ತಿ. ಇದಿನಬ್ಬ.—ಹಿಂದೆ ವಕ್ಫ್ ಮಂತ್ರಿಗಳು ಒಂದೊಂದು ಕ್ಷೇತ್ರದ ಶಾಸಕರಿಂದ ೨–೨ ಅರ್ಜಿಗಳನ್ನು ಕಳುಹಿಸಬೇಕೆಂದು ಪತ್ರ ಬರೆದಿದ್ದಾರೆ. ಅದರಂತೆ ಎಲ್ಲ ಶಾಸಕರು ೨–೨ ಅರ್ಜಿಗಳನ್ನು ಕಳುಹಿಸುವುದಾದರೆ, ಅವರಿಗೆ ಬರುವಂತಹ ಹಣ ಬಹಳ ಕಡಿಮೆಯಾಗುತ್ತದೆ, ಆದ್ದರಿಂದ ಕೇವಲ ೭–೮ ಜನಗಳಿಗೆ ಮಾತ್ರ ಎಂಬುದಾಗಿ ರಿಸ್ಟ್ರಿಕ್ಷನ್ ಮಾಡಿ. ಸಹಾಯಧನವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಹಿಂದೆ ಎಲ್ಲಾ ಶಾಸಕರುಗಳು ಅವರವರ ಕ್ಷೇತ್ರದಿಂದ ವಕ್ಫ್ ಕೆಲಸಗಳನ್ನು ಮಾಡುವ ಮುಂಚೆ ಅವರಿಂದ ಅಭಿಪ್ರಾಯ ಪಡೆದು ಮಾಡುತ್ತಿದ್ದರು, ಅದನ್ನೇ ಅನುಸರಿಸಿ ಎಲ್ಲ ಶಾಸಕರು ಅವರವರ ಕ್ಷೇತ್ರಗಳಲ್ಲಿ ಆಗಬೇಕಾಗಿರುವ ವಕ್ಫ್ ಕೆಲಸಗಳ ಬಗ್ಗೆ ೨–೨ ಅರ್ಜಿಗಳನ್ನು ಕಳುಹಿಸಿಕೊಡಿ ಎಂಬುದಾಗಿ ಪತ್ರ ಬರೆದಿದ್ದೇನೆ. ನಮ್ಮಲ್ಲಿರುವಂತಹ ಹಣ ೫೦ ಲಕ್ಷ ರೂಪಾಯಿಗಳು. ಆದ್ದರಿಂದ ನಮ್ಮ ರಾಜ್ಯದಲ್ಲಿರುವಂತಹ ೨೨೪ ಕ್ಷೇತ್ರಗಳಲ್ಲಿ ಇರುವಂತಹ ಶಾಸಕರು ೨–೨ ಅರ್ಜಿಗಳನ್ನು ಕಳುಹಿಸಿಕೊಡಬೇಕು. ಅದರಂತೆ ಹಣವನ್ನು ಬಿಡುಗಡೆ ಮಾಡಲಾಗುವುದು. ಇನ್ನೂ ಹೆಚ್ಚು ಹಣ ಬಂದರೆ ಇನ್ನೂ ಹೆಚ್ಚು ಹೆಚ್ಚು ಹಣವನ್ನು ಅವರಿಗೆ ಬಿಡುಗಡೆ ಮಾಡಲಾಗುವುದು.

ಅಲ್ಪಕಾಲಾವಧಿ ಪ್ರಶ್ನೆ ನಂ. ೩ (೧೦)

ಶ್ರೀಮಲ್ಲಿಕಾರ್ಜುನ್ ಎಂ. ಖರ್ಗೆ.—ಇವರ ಉತ್ತರವನ್ನು ನೋಡಿದರೆ ನನಗೆ ಸ್ವಲ್ಪ ಅನುಮಾನ ಆಲ್ಲ. ನಗು ಬರುತ್ತಿದೆ. ಏಕೆಂದರೆ ಅವರಿಗೆ ಇದರಿಂದ ಎಸ್.ಸಿ. ಜನರ ಬಗ್ಗೆ ಎಷ್ಟು ಆಸಕ್ತಿ ಇದೆ ಎನ್ನುವುದಕ್ಕಿಂತಹದ್ದನ್ನು ತೋರಿಸುತ್ತದೆ. ಈಗಾಗಲೇ ಎಸ್.ಸಿ./ಎಸ್.ಟಿ. ಪಟ್ಟಿಯ ಬಗ್ಗೆ ವಾದ ವಿವಾದ ನಡೆಯುತ್ತಿದೆ ಎನ್ನುವುದಕ್ಕಿಂತಹ ವಿಚಾರ ಕೂಡ ಅವರಿಗೆ ಗೊತ್ತಿದೆ. ೭೧ನೇ ಸಾಲಿನ ಜನಗಣತಿಯ ಆಧಾರದ ಮೇಲೆ ಜಿಲ್ಲಾ ಪರಿಷತ್ತು, ಮಂಡಲ್ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳ ಕ್ಷೇತ್ರಗಳನ್ನು ವಿಂಗಡಣೆ ಮಾಡಬೇಕೆಂದು ಆದೇಶ ನೀಡಿದ್ದಾರೆ. ಇದರಿಂದ ಎಸ್.ಸಿ. / ಎಸ್. ಟಿ. ಜನಾಂಗದವರಿಗೆ ದೊಡ್ಡ ಅನಾಹುತವನ್ನು ಈ ಸರ್ಕಾರ ಮಾಡುತ್ತಿದೆ ಎಂದು ಹೇಳಬೇಕಾಗುತ್ತದೆ. ಇದಕ್ಕೆ ಕಾರಣ ಏನೆಂದರೆ, ೧೯೭೬ ರಲ್ಲಿ ಎಸ್.ಸಿ./ಎಸ್.ಟಿ. ಜಾತಿಯವರಿಗೆ ಇದ್ದಂತಹ ಏರಿಯಾ ರಿಸ್ಟ್ರಿಕ್ಷನನ್ನು ತೆಗೆದುಬಿಟ್ಟು, ಆ ಬಗ್ಗೆ ಸರ್ಕಾರಿ ಆರ್ಡ್ಲೊಂದನ್ನು ಮಾಡಿ, ನಂತರ ಕಾನೂನನ್ನು ಮಾಡಿ, ಕೆಲವು ಜಾತಿಗಳನ್ನು ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಎಸ್.ಸಿ ಪಟ್ಟಿಗೆ ಸೇರಿಸಿದ್ದಾರೆ. ಆ ರೀತಿ ಸೇರಿಸಿದ ಮೇಲೆ ೧೯೮೧ ರಲ್ಲಿ ಜನಗಣತಿಯನ್ನು ಮಾಡುವಾಗ ಅವರೆಲ್ಲರೂ ಎಸ್.ಸಿ. ಪಟ್ಟಿಯಲ್ಲಿ ಸೇರಿಬಿಟ್ಟರು ಆದರೆ, ಇವರು ೧೯೭೧ರ ಜನಗಣತಿಯನ್ನು ಆಧಾರವಾಗಿಟ್ಟುಕೊಂಡು ಕ್ಷೇತ್ರಗಳ ಪುನರ್ವಿಂಗಡಣೆ ಮಾಡುವುದಾದರೆ, ಆ ಜನರಿಗೆ ಪ್ರಾತಿನಿಧ್ಯವನ್ನು ಕೊಡುವುದರಲ್ಲಿ ಕಡಿಮೆ ಮಾಡುವುದಕ್ಕೆ ನಡೆಸಿರುವ ಪಂತಹ ಕುತಂತ್ರ ಇದು. ಆದಕ್ಕಾಗಿಯೇ ಇವರು ೧೯೭೧ನೇ ಜನಗಣತಿಯನ್ನು ಆಧಾರವಾಗಿಟ್ಟುಕೊಂಡು ಕ್ಷೇತ್ರಗಳ ಪುನರ್ವಿಂಗಡನೆ ಮಾಡಬೇಕೆಂದು ಆದೇಶವನ್ನು ನೀಡಿದ್ದಾರೆಂದು ನಾನು ಇವರ ಮೇಲೆ ನೇರವಾಗಿ ಆಪಾದನೆ ಮಾಡಬೇಕಾಗುತ್ತದೆ. ಇಲ್ಲ ಅವರ ಬಗ್ಗೆ ಕಳಕಳಿ ಇದ್ದರೆ ೧೯೭೧ ರಲ್ಲಿ ಜನಗಣತಿ ಮಾಡುವಾಗ ಯಾವ ಯಾವ ಜಾತಿಗಳು ಎಸ್.ಸಿ. ಪಟ್ಟಿಯಲ್ಲಿದ್ದವು ಅದನ್ನ್ನು ಸೀಮಿತ ಮಾಡಿ ಚುನಾವಣೆಯನ್ನು ಮಾಡಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲದಿದ್ದರೆ ಇದನ್ನು ಸರಿಪಡಿಸುವುದಕ್ಕೆ ಯಾವ ರೀತಿಯ ವ್ಯವಸ್ಥೆಯನ್ನು ಮಾಡುತ್ತೀರಿ ? ಮೊದಲನೆಯದಾಗಿ ನಾವು ಜಿಲ್ಲಾ

ಪರಿಷತ್ತಿನ ಚುನಾವಣೆ ಬೇಡ ಎಂದು ಹೇಳುತ್ತಿದ್ದವರು ಏಕೆಂದರೆ ಪಟೇಲರು ಇದ್ದಾಗ, ಶ್ಯಾನು ಭೋಗರು ಇದ್ದಾಗ ಏನೇನು ಮಾಡಿದ್ದಾರೆಂಬುದು ಎಲ್ಲರಿಗೂ ಗೊತ್ತಿದೆ. ಆದರೂ ಪುನಃ ತಿರುಗಿ ಅದೇ ವ್ಯವಸ್ಥೆಯನ್ನು ಮಾಡುವುದಕ್ಕೆ ಹೋಗಿ ಜಿಲ್ಲಾ ಪರಿಷತ್ತನ್ನು ಜಾರಿಗೆ ತರುತ್ತಿದ್ದಾರೆ. ಇದಕ್ಕಾಗಿಯೇ ಇದನ್ನು ಬೇಡ ಅಂತಹೇಳಿದ್ದು. ನಿಮ್ಮ ಕಾಲದಲ್ಲೇ ಇವರಿಗೆ ಸರಿಯಾದ ಪ್ರಾತಿನಿಧ್ಯ ಸಿಕ್ಕಲಿಲ್ಲವೆಂದ ಮೇಲೆ ಇನ್ನು ಈ ಒಂದು ವ್ಯವಸ್ಥೆಯೊಳಗೆ ಅವರಿಗೆ ನ್ಯಾಯ ಸಿಕ್ಕುತ್ತದೆಯೇ ? ಇಷ್ಟೆಲ್ಲಾ ಅನ್ಯಾಯ ವಾಗುತ್ತಿದೆ. ಇದನ್ನು ಸರಿಪಡಿಸುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—೧೯೭೧ ಜನಗಣತಿಯ ಆಧಾರದ ಮೇಲೆ ಎಸ್.ಸಿ. ಪಟ್ಟಿಯಲ್ಲಿ ಯಾವ ಯಾವ ಜಾತಿಗಳು ಸೇರಿದ್ದಾರೆ ಎಂಬುದರ ಬಗ್ಗೆ ಆದೇಶ ಇದೆ. ಅದರ ಪ್ರಕಾರ ಮಾಡಬಹುದಕ್ಕೆ ಹೋದರೆ ಇವರು ಅನ್ಯಾಯವಾಗುತ್ತದೆಂದು ಯಾವ ಅರ್ಥದಲ್ಲಿ ಹೇಳುತ್ತಾರೋ ನನಗೆ ಅರ್ಥವಾಗಲಿಲ್ಲ ಇದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಪಾಪುಲೇಷನ್ ಕಂಡೀಷನ್ ಏನು ಇತ್ತು ಅದನ್ನು ೫೦೦ ರಿಂದ ೪೦೦ಕ್ಕೆ ಇಳಿಸಿದ್ದೇವೆ. In proportion to the population reservation will be made according to the provisions of the Act. ಅವರ ವಾದಕ್ಕೆ ಯಾವುದೇ ಕಾರಣ ಇಲ್ಲವೆಂದು ಹೇಳಂತ್ತೇನೆ ಎರಡನೆಯದಾಗಿ ಈ ಸದನದ ಹಿರಿಯ ಸದಸ್ಯರಾಗಿರುವಂತಹ ಶ್ರೀ ಬಸವಲಿಂಗಪ್ಪನವರು ಈ ಸದನದಲ್ಲಿ ನನ್ನ ಇಲಾಖೆಯ ಬೇಡಿಕೆಗಳ ಬಗ್ಗೆ ನಡೆದಂತಹ ಚರ್ಚೆಯಲ್ಲಿ ರಾಜ್ಯಾಂಗಬದ್ಧವಾಗಿ ಕಾನೂನಿನಲ್ಲಿರುವಂತಹ ಕೆಲವು ನ್ಯೂನತೆಗಳನ್ನು ನನಗೆ ಜ್ಞಾಪಿಸಿ ಕೊಟ್ಟಿರು. ಅವರು ಹೇಳಿದ ಮಾತನ್ನು ಒಪ್ಪಿಕೊಂಡು ೧೯೭೧ನೇ ಸಾಲಿನ ಜನಗಣತಿಯನ್ನು ಆಧಾರ ವಾಗಿಟ್ಟುಕೊಳ್ಳಬೇಕಾಯಿತು. ಏಕೆಂದರೆ ಯಾವುದೇ ರೀತಿಯ ವಿಂಗಡಣಾತಿಯನ್ನು ಮಾಡಬೇಕಾಗಿದ್ದರೆ, ರಾಜ್ಯಾಂಗದ ಶಿಷ್ಠರ ವಿಧಿನಿಯಮಕ್ಕನುಗುಣವಾಗಿ ವಿಂಗಡಣಾತಿಯನ್ನು ಮಾಡಬೇಕಾಗುತ್ತದೆ. ೧೯೭೬ ರಲ್ಲಿ ತಿದ್ದುಪಡಿ ಕೂಡ ಆಗಿದೆ.

If you permit, I will read the Explanation to Article 330 of the Constitution. It reads :

> " In this article and in article 332, the expression 'population' means the population as ascertained at the last preceding census of which the relevant figures have been published :
>
> " Provided that the reference in this **Explanation** to the last preceding census of which the relevant figures have been published shall, until the relevant figures for the first census taken after the year 2000 have been published, be construed as a reference to the 1971 Census. "

ಅದಕ್ಕೆ ಪ್ರಾವಿಜನ್ ಮಾಡಿದ್ದೇವೆಯೇ ಹೊರತು ರಾಜ್ಯಾಂಗದ ವಿರುದ್ಧವಾಗಿ ನಾವು ಮಾಡಿಲ್ಲ. ೨೦ನೇ ಶತಮಾನದ ಕೊನೆಯಂ ಹಂತದಲ್ಲಿದ್ದೇವೆ. ಇಲ್ಲಿಯವರೆವಿಗೂ ಅನ್ಯಾಯವಾಗಿರುವ ಬಗ್ಗೆ ಚಕಾರ ಶಬ್ದ ಇವರದ್ದು ಇಲ್ಲ. ಈಗ ಅನ್ಯಾಯವಾಗಿದೆ ಎಂಬುದಾಗಿ ಹೇಳುತ್ತಿದ್ದಾರೆ. ನಾವು ರಾಜ್ಯಾಂಗದ ವಿಧಿಯನ್ನೇ ಅಳವಡಿಸಿದ್ದೇವೆ. ಇದರಿಂದ ಅವರಿಗೆ ಯಾವುದೇ ರೀತಿಯ ಅನ್ಯಾಯವಾಗಿಲ್ಲ.

ಶ್ರೀ ಮಲ್ಲಿಕಾರ್ಜುನ್ ಎಂ. ಖರ್ಗೆ —ಅವರಿಗೆ ಅರ್ಥವಾಗಿರಬಹುದು. ಜನಗಳಿಗೆ ಅರ್ಥವಾಗಿಲ್ಲ. ತಾವು ನಮ್ಮನ್ನು ಕನ್ವಿನ್ಸ್ ಮಾಡಿ. ಸದನಕ್ಕೂ ಕನ್ವಿನ್ಸ್ ಮಾಡಬೇಕು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಆ ಸದಸ್ಯರನ್ನು ಕರೆದು ಚರ್ಚೆ ಮಾಡಿ ಕನ್ವಿನ್ಸ್ ಮಾಡಿ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್.—ಕರೆದು ಮಾತನಾಡುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಇದು ಮಹತ್ವದ ಪ್ರಶ್ನೆ ಇದೆ. ಇದನ್ನು ಅರ್ಧ ಗಂಟೆ ಚರ್ಚೆಯಾಗಿ ಪರಿವರ್ತನೆ ಮಾಡಿ ತಕ್ಷಣವೇ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಆಗಬಹುದು.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್.—ಶ್ರೀಮಾನ್ ಮಲ್ಲಿಕಾರ್ಜುನ್ ಎಂ. ಖರ್ಗೆಯವರಿ ಮಹತ್ವರವಾದ ಪ್ರಶ್ನೆಯನ್ನು ಎತ್ತಿದ್ದಾರೆ. ಸರ್ಕಾರ ನೇರವಾಗಿ ಉತ್ತರವನ್ನು ಹೇಳಬೇಕಾಗಿತ್ತದೆ. ಇವನ್ನು ಪ್ರಶ್ನೋತ್ತರ ಸಮಯದಲ್ಲಿ ಉತ್ತರ ಹೇಳಿ ಮುಗಿಸುವುದಕ್ಕಾಗುವುದಿಲ್ಲ. ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಮ್ಮ ಇಲಾಖೆಗಳ ಬೇಡಿಕೆಗೆ ಬಂದಾಗ ಆವಾಗ ಎಲ್ಲ ವಿಚಾರಗಳನ್ನು ಹೇಳಬಹುದು.

ಶ್ರೀ ಮಲ್ಲಿಕಾರ್ಜುನ್ ಎಂ. ಖರ್ಗೆ.—ಈಗಾಗಲೇ ಎಲ್ಲ ಜಿಲ್ಲಾಧಿಕಾರಿಗಳಿಗೆ ಜಿಲ್ಲಾ ಪರಿಷತ್ತು, ಮಂಡಲ್ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳ ಚುನಾವಣೆಯನ್ನು ಮಾಡುವುದಕ್ಕೆ ಕ್ಷೇತ್ರ ಗಳನ್ನು ಏಂಗಡನೆ ಮಾಡಿ ಎಂಬುದಾಗಿ ನಿರ್ದೇಶನವನ್ನು ಕೊಟ್ಟಿದ್ದಾರೆ. ಇದು ಇತ್ಯರ್ಥವಾಗಂವವರೆಗೆ ಅದನ್ನು ತಡೆಹಿಡಿಯಿರಿ.

ಶ್ರೀ ಆರ್. ವೆಂಕಟರಾಮಯ್ಯ.—ನಜೀರ್ ಸಾಬ್ ಅವರು ಅರ್ಧ ಮಾಡಿಕೊಂಡದ್ದು ಸರಿಯಲ್ಲ. ೧೯೭೬ ಆದಮೇಲೆ ಕ್ಲಾಸಿಫಿಕೇಷನ್ ಆಗಿದೆ. ೧೯೭೧ಕ್ಕೆ ಲಿಮಿಟ್ ಮಾಡಿದರೆ ಹೆಚ್ಚು ಕಡಿಮೆ ಬರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—Till he takes further decision ಈಗ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡಬೇಕು. ಈಗಾಗಲೇ ಅವರು ಏನು ಕಾನ್ಸ್ಟಿಟ್ಯೂಷನ್ ಮಾಡಿತ್ತಿದ್ದಾರೆ ಅದನ್ನು ಮಾಡಬೇಡಿ ಎಂದು ಆದೇಶ ಕೊಡಬೇಕು.

SRI ABDUL NAZEER SAB.—I will ask the Hon. Member only one fundamental question. Can I act against the Constitution ?

SRI MALLIKARJUNA KHARGE.—We have not asked you to act like that. You issued order that those communities which you have included after 1971, are not eligible.

ಅಧ್ಯಕ್ಷರು.—ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನಲ್ಲ ಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಆದನ್ನು ಕೊಡುವುದಕ್ಕೆ ಬರುವುದಿಲ್ಲ. ಈ ದೇಶದಲ್ಲಿ ಪೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಏನು ಅನ್ಯಾಯವಾಗಿದೆ ಅದು ಇಂದು ಆದದ್ದಲ್ಲ, ಹಿಂದೆಯೇ ಆಗಿದೆ. ಆಗ ನೀವು ಬಾಯಿ ಮುಚ್ಚಿಕೊಂಡಿದ್ದಿರಿ. ಇವತ್ತು ಚಳಿಚಳಿ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮನ್ನು ಕೇಳಿ ಮಾಡಬೇಕಾಗಿಲ್ಲ. ಮಾಡುವಾಗ ಮಾಡುತ್ತೇವೆ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್.—೧೯೭೧ರಲ್ಲಿ ಪಾರ್ಲಿಮೆಂಟಿನಲ್ಲಿ ತೀರ್ಮಾನವಾಗಿರುವುದು ಬೇರೆ. ೧೯೭೧ರ ಸೆನ್ಸಸ್ ಪ್ರಕಾರ ಆಗಿರುವ ತಿದ್ದುಪಡಿ ಬೇರೆ. ಅದಕ್ಕೂ ಇದಕ್ಕೂ ಕೂಡಿಸ ಬೇಡಿ.

SRI MALLIKARJUNA KHARGE.—For Half-an-hour discussion I agree But, till then he should instruct all the Deputy Commissioners not to take up this issue.

ಶ್ರೀ ಅಬ್ದುಲ್ ನಜೀರ್‌ಸಾಬ್.—ಕಾನೂನು ಪರಿಮಿತಿಯೊಳಗೆ ರಾಜ್ಯಾಂಗದ ವಿಧಿಗಳಿಗೆ ಅನುಗುಣ ವಾಗಿ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಈಗ ಆ ವಿಚಾರವನ್ನು ಅರ್ಧ ಗಂಟೆಯ ಚರ್ಚೆಗೆ ತೆಗೆದುಕೊಂಡಿದ್ದೇವೆ. ಅದುವರೆಗೆ ಜಿಲ್ಲಾ ಪರಿಷತ್ತಿನ ಆಜ್ಞೆಯನ್ನು ತಡೆಹಿಡಿಯುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.— ತಾವು ಅರ್ಧ ಗಂಟೆ ಚರ್ಚೆಗೆ ಒಪ್ಪಿದ್ದೀರಲ್ಲ, ಕಳಂಹಿಸಿ ಕೊಡುತ್ತೇವೆ.

ಅಧ್ಯಕ್ಷರು.—ಆಗಬಹುದು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸಿರುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಲಿಖಿತ ಮೂಲಕ ಉತ್ತರಿಸಿರುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡ ಲಾಗಿದೆ.

ರಾಜ್ಯದಲ್ಲಿ ತೆಂಗಿನ ಕಾಯಿ ಬೆಲೆ ಇಳಿ ಮುಖವಾಗಿರುವ ಬಗ್ಗೆ

೯೯. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ತೋಟಗಾರಿಕೆ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯಯಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹಠಾತ್ ಆಗಿ ತೆಂಗಿನ ಕಾಯಿ ಬೆಲೆ ಇಳಿ ಮುಖವಾಗಿ ರೈತರಿಗೆ ತೊಂದರೆಯಾಗಿ ರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ತೆಂಗಿಗೆ ಬೆಂಬಲ ಬೆಲೆ ಜಾರಿಗೊಳಿಸಲು ಸರ್ಕಾರದವರು ಉದ್ದೇಶಿಸಿ ದ್ದಾರೆಯೆ ?

ಶ್ರೀ ಬಿ. ಸೋಮಶೇಖರ.—(ತೋಟಗಾರಿಕೆ ರಾಜ್ಯ ಸಚಿವರು.)

ಅ) ಕಳೆದ ವರ್ಷ ಅಂದರೆ ೧೫೫೯ನೇ ಸಾಲಿನಲ್ಲಿ ಜನವರಿ ಇಂದ ಡಿಸೆಂಬರ್‌ವರೆಗೆ ತೆಂಗಿನ ಬೆಲೆ ಸ್ವಲ್ಪ ಮಟ್ಟಿಗೆ ಇಳಿ ಮುಖವಾಗಿದೆ ಆದರೆ ಜನವರಿ ೧೯೬೦ರಿಂದ ತೆಂಗಿನ ಸಗಟು ಹಾಗೂ ಚಿಲ್ಲರೆ ಬೆಲೆಯಲ್ಲಿ ಏರಿಕೆ ಯಾಗಿರುವುದು ಕಂಡು ಬಂದಿರುತ್ತದೆ.

ಆ) ತೆಂಗಿಗೆ ಬೆಂಬಲ ಬೆಲೆ ನೀಡುವ ವಿಷಯ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುವುದರಿಂದ ಪ್ರಯತ್ನ ಮಾಡಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ನಂದಾವರ ಹಿರಿಯ ಪ್ರಾಥಮಿಕ ಶಾಲೆ

೨೪೨. ಶ್ರೀ ಬಿ.ಎ. ಉಪಾರಬ್ಬ (ವಿಟ್ಲ) —ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ . ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಯಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ನಂದಾವರ ಹಿರಿಯ ಪ್ರಾಥಮಿಕ ಶಾಲೆ ಯಲ್ಲಿರುವ ವಿದ್ಯಾರ್ಥಿಗಳ ತರಗತಿವಾರು ಸಂಖ್ಯೆ ಎಷ್ಟು

ಆ) ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪಾಧ್ಯಾಯರ ಸಂಖ್ಯೆ ಎಷ್ಟು

ಇ) ಸದರಿ ಶಾಲೆಯಲ್ಲಿನ ಕಡಿಮೆ ಸಂಖ್ಯೆಯ ಉಪಾಧ್ಯಾಯರುಗಳಿಂದ ಕಾರ್ಯ ನಿರ್ವಹಣೆ ಮಾಡಲು ಸಾಧ್ಯವೇ

ಈ) ಈ ಬಗ್ಗೆ ಅವಶ್ಯ ವ್ಯವಸ್ಥೆ ಮಾಡಲು ಯಾವ ಕ್ರಮ ತೆಗೆದುಕೊಂಡಿದೆ.